**ಸಿಸಿ ಸಂಖ್ಯೆ**: 201/2018 **ಚಾಸಾ- 23** : **ಫ್ರಾಸಾ -** : 12

**ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮೂಡಬಿದಿರೆ**

**ಸಿಸಿ ನಂ.** 201/2018,

**ಚಾಸಾ- 23, ಫ್ರಾಸಾ -12**

| | |
|---|---|
| ಹೆಸರು | ರಾಮಚಂದ್ರ ನಾಯ್ಕ |
| ತಂದೆಯ ಹೆಸರು | ಕೃಷ್ಣಾ ನಾಯ್ಕ |
| ವಯಸ್ಸು | 55 ವರ್ಷ |
| ಕೆಲಸ | ಪೊಲೀಸ್ ನಿರೀಕ್ಷಕರು, ಮಲ್ಪೆ ವೃತ್ತ |
| ವಾಸ | ಉಡುಪಿ |
| ಪ್ರಮಾಣೀಕರಿಸಿದ ದಿನಾಂಕ | 06-08-2026 |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ನಾನು ದಿಃ 13-06-2016 ರಿಂದ ದಿಃ 18-03-2019 ರವರೆಗೆ ಮೂಡಬಿದ್ರೆ ಠಾಣೆಯಲ್ಲಿ ಪೊಲೀಸ್ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25-09-2017 ರಂದು ಈ ಪ್ರಕರಣದ ಕಡತವನ್ನು ಚಾಸಾ-22 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿಕೊಟ್ಟಂತೆ ಚಾಸಾ-6 ಮತ್ತು ಚಾಸಾ-7 ರವರ ಸಮಕ್ಷಮದಲ್ಲಿ ಸ್ಥಳ ಮಹಜರನ್ನು ಜರುಗಿಸಿರುತ್ತೇನೆ. ಸ್ಥಳ ಮಹಜರು ವೇಳೆಯಲ್ಲಿ ಆರೋಪಿಯು ಕೃತಕ್ಕೆ ಬಳಸಿದ ಕತ್ತಿಯೊಂದನ್ನು ಸ್ಥಳದಲ್ಲಿ ಬಿದ್ದಿದ್ದು, ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಕೃತ ಸ್ಥಳ ನಕಾಶೆಯನ್ನು ನಾನು ತಯಾರಿಸಿರುತ್ತೇನೆ. ಸಾಕ್ಷಿ ನಿಪಿ-2 ನ್ನು ನೋಡಿ ಅದರಲ್ಲಿ ತನ್ನ ಸಹಿ ಇದೆ

ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ದಾಖಲಾತಿಯನ್ನು ನೋಡಿ ತಾನು ಬಿಡಿಸಿದ ನಕ್ಷೆ ಎಂದು ನುಡಿಯುತ್ತಾರೆ. ಸದರಿ ನಕ್ಷೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2 ರಿಂದ ಚಾಸಾ-5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸ್ವಾಧೀನ ಪಡಿಸಿಕೊಂಡ ಕೊಕ್ಕೆ ಕತ್ತಿಯನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿಯನ್ನು ನಿವೇದಿಸಿಕೊಂಡಿರುತ್ತೇನೆ.

2. ದಿಃ 18-11-2017 ರಂದು ನಾನು ಮೂಡಬಿದ್ರೆ ಠಾಣಾ ಅಪರಾಧ ಸಂಖ್ಯೆ 364/2017 , 397/2017 ಮತ್ತು 454/2017, 427/2017 , 434/2017 ರಲ್ಲಿ ಕಳುವಾದ ಸ್ವತ್ತು ಮತ್ತು ಆರೋಪಿಯನ್ನು ಪತ್ತೆ ಹಚ್ಚುವ ಸಲುವಾಗಿ ನಾನು ಚಾಸಾ-17 ರಿಂದ ಚಾಸಾ-22 ರವರನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಿರುತ್ತೇನೆ. ಅದರಂತೆ ಅದೇ ದಿನ ಬೆಳಿಗ್ಗೆ 8-45 ಗಂಟೆಗೆ ಚಾಸಾ-22 ರವರು ಸಿಬ್ಬಂದಿಗಳೊಂದಿಗೆ ಆರೋಪಿ ಲೊಕೇಶ್ ರವರನ್ನು ಮಾರ್ಪಾಡಿ ಗ್ರಾಮದ ಮರಿಯಾಡಿ ಎಂಬಲ್ಲಿ ಬೆಳಿಗ್ಗೆ 8-15 ಗಂಟೆಗೆ ವಶಕ್ಕೆ ಪಡೆದುಕೊಂಡು ವರದಿಯೊಂದಿಗೆ ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಸದರಿ ವರದಿಯನ್ನು ನಾನು ಸ್ವೀಕರಿಸಿಕೊಂಡು ಆರೋಪಿಯನ್ನು ವಿಚಾರಿಸಿದಾಗ, ಆತನು ತನ್ನ ತಪ್ಪನ್ನು ಒಪ್ಪಿ ಕೊಂಡು, ಸ್ವಇಚ್ಛಾ ಹೇಳಿಕೆಯನ್ನು ನೀಡಿರುತ್ತಾರೆ. ಸಾಕ್ಷಿಯ ಒಂದು ದಾಖಲಾತಿಯನ್ನು ನೋಡಿ ಆರೋಪಿಯು ನೀಡಿದ ಸ್ವಇಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಯನ್ನು ನಿಪಿ-1ತಿ ಎಂದು , ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಮುಂದೆ ಹಾಜರು ಪಡಿಸಿದ ವರದಿಯನ್ನು ನೋಡಿ

ಗುರುತಿಸಿದ್ದು, ಅದನ್ನು ನಿಪಿ-13 ಎಂದು , ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

3. ಆರೋಪಿಯ ಸ್ವಇಚ್ಛಾ ಹೇಳಿಕೆಯಂತೆ ಚಾಸಾ-6 ಮತ್ತು ಚಾಸಾ-11 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಆರೋಪಿಯೊಂದಿಗೆ ಪಂಚರು, ಸಿಬ್ಬಂದಿಗಳು ಮತ್ತು ತನಿಖೆಗೆ ಬೇಕಾದ ಪರಿಕರಗಳೊಂದಿಗೆ ಠಾಣಾ ಇಲಾಖಾ ವಾಹನದಲ್ಲಿ ಆತನು ಮಂಗಳೂರು ತಾಲೂಕಿನ ಬಡಗ ಎಡಪದವು ಗ್ರಾಮದ ಉರ್ಕಿ ಎಂಬಲ್ಲಿ ಇರುವ ಲಿಂಗಪ್ಪ ಪೂಜಾರಿ ಎಂಬುವವರಿಗೆ ಸೇರಿದ ಮನೆ ನಂ. 1-4(1) ರಲ್ಲಿ ವಾಸವಾಗಿರುವ ಜಯಕುಮಾರ್ ಎನ್ನುವವರ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ಸದರಿ ಮನೆಯ ಬಳಿ ಇರುವ ಕೊಟ್ಟಿಗೆಯ ಹತ್ತಿರ ಕರೆದುಕೊಂಡು ಹೋಗಿ, ಕೊಟ್ಟಿಗೆಯ ಹಂಚು ತುಂಡುಗಳ ಅಡಿ ಭಾಗದಲ್ಲಿ ಇಟ್ಟಿದ್ದ ಒಂದು ಹಳೆ ಬಟ್ಟೆಯ ಗಂಟನ್ನು ತೋರಿಸಿ, ಅದರಿಂದ ಬಂಗಾರದ ಆಭರಣಗಳನ್ನು ತೆಗೆದು ನನ್ನ ಮುಂದೆ ಹಾಜರು ಪಡಿಸಿರುತ್ತಾನೆ. ಅದನ್ನು ಪರಿಶೀಲಿಸಿದಾಗ, ಒಂದು ಬಂಗಾರದ ಜೊಮಾಲೆಗೆ ಕೆಂಪು ಕಲ್ಲಿನ ಪದಕ ಇರುತ್ತದೆ, ಅದು ಸುಮಾರು 7 ಗ್ರಾಂ ಬಂಗಾರ ಇರುತ್ತದೆ. ಬಂಗಾರದ ಮಗುವಿನ ಸಣ್ಣ ಚೈನ್ ಒಂದು, ಸದರಿ ಚೈನ್ 4.380 ಗ್ರಾಮ ತೂಕವಿರುತ್ತದೆ, ಮಹಿಳೆಯರು ಧರಿಸುವ ಬಂಗಾರದ ಎರಡು ಉಂಗುರುಗಳು,ಅವುಗಳ ಒಟ್ಟು ತೂಕ 4.260 ಗ್ರಾಂ ಇರುತ್ತದೆ. ಆರೋಪಿತನು ಈ ಸ್ವತುಗಳನ್ನು ದಿಃ 05-09-2017 ರಂದು ಕಲ್ಲಬೆಟ್ಟುವಿನಲ್ಲಿ ಇರುವ ಒಂದು ಮನೆಯಿಂದ ಕಳುವು ಮಾಡಿದಾಗಿ ಒಪ್ಪಿರುತ್ತಾನೆ. ಸದರಿ ಸ್ವತ್ತುಗಳು ಮೂಡಬಿದ್ರೆ ಪೊಲೀಸ್ ಠಾಣೆಯ ಅ.ಕ್ರ ನಂ. 454/2017 ಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ.

4. ನಂತರ ಆರೋಪಿಯು ಬಂಗಾರದ ಬಳೆ ಒಂದು ಜೊತೆ, ಅದರ ಒಟ್ಟು ತೂಕ 16.620 ಗ್ರಾಂ ವಿರುತ್ತದೆ. ಪುರುಷರು ಧರಿಸುವ ಬಂಗಾರದ ಉಂಗುರ 2 ಅದರ ಒಟ್ಟು ತೂಕ 8.080 ಗ್ರಾಂ ಆಗಿತ್ತು. ಒಂದು ಬಂಗಾರದ ಚೈನ್, ಇದರ ಒಟ್ಟು ತೂಕ 10.430 ಗ್ರಾಂ ಆಗಿರುತ್ತದೆ. ಬಂಗಾರದ ಒಂದು ಎಳೆಯ ಕರಿಮಣ ಸರಿ –1, ಅದರ ಎರಡೂ ತುದಿಯಲ್ಲಿ ಎರಡು ಕೆಂಪು ಹವಳ ಮತ್ತು ಒಂದು ತಾಳಿ ಇರುತ್ತದೆ. ಇದರ ಒಟ್ಟು ತೂಕ 11.870 ಗ್ರಾಂ ಆಗಿರುತ್ತದೆ. ಆರೋಪಿಯು ಈ ಸ್ವತ್ತುಗಳನ್ನು ದಿಃ 25–09–2017 ರಂದು ಪ್ರಾಂತ್ಯ ಗ್ರಾಮದ ಲಾಡಿ ಎಂಬಲ್ಲಿ ಇರುವ ಈ ಪ್ರಕರಣಕ್ಕೆ ಸಂಬಂಧಿಸಿದ ಮನೆಯಿಂದ ಕಳುವು ಮಾಡಿದ್ದಾಗಿ ಹೇಳಿರುತ್ತಾನೆ.

5. ಆರೋಪಿಯು ಮುಂದುವರಿದ ಬಂಗಾರದ ಎರಡು ಎಳೆ ಕರಿಮಣಿ ಸರವೊಂದು ಇದರ 4 ತುದಿಗಳಲ್ಲಿ ಎರಡೆರಡು ಬಂಗಾರದ ಗುಂಡುಗಳನ್ನುಜೋಡಿಸಿದ್ದು, ತುದಿಯಲ್ಲಿ ಕೆಂಪು ಹವಳ ಮತ್ತು ತಾಳಿಯನ್ನು ಜೋಡಿಸಲಾಗಿತ್ತು. ಇದರ ಒಟ್ಟು ತೂಕ 16.700 ಗ್ರಾಂ ಆಗಿರುತ್ತದೆ. ಬಂಗಾರದ ಉಂಗುರುಗಳ ನಾಲ್ಕು, ಇದರ ಒಟ್ಟು ತೂಕ 8.160 ಗ್ರಾಂ ಇರುತ್ತದೆ. ಬಂಗಾರದ ನೆಕ್ ಲೇಸ್ ಒಂದು ಇದರ ಒಟ್ಟು ತೂಕ 12.530 ಗ್ರಾಂ ಇರುತ್ತದೆ. ಆರೋಪಿಯು ಈ ಸ್ವತ್ತುಗಳನ್ನು ವಶಪಡಿಸಿಕೊಂಡಾಗ, ದಿಃ 11–10–2017 ರಂದು ಬೆಳುವಾಯಿಯ ದುರ್ಜೆಟ್ಟು ಎಂಬಲ್ಲಿನ ಒಂದು ಮನೆಯಿಂದ ಕಳವು ಮಾಡಿದ್ದಾಗಿ ನನ್ನಲ್ಲಿ ಹೇಳಿರುತ್ತಾನೆ. ಈ ಸ್ವತ್ತುಗಳು ಠಾಣಾ ಅ.ಕ್ರ ನಂ. 425/2017 ಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ.

6. ಆರೋಪಿಯು ಮುಂದುವರಿದು, ಬಂಗಾರದ ಸಣ್ಣ ನೆಕ್ ಲೇಸ್ ಒಂದು, ಅದರ ಒಟ್ಟು ತೂಕ 6.280 ಗ್ರಾಂ ಇರುತ್ತದೆ. ಬಂಗಾರದ ಬಳೆ ಒಂದು ಜೊತೆ, ಇದರ ಒಟ್ಟು ತೂಕ 12.280 ಗ್ರಾಂ ಆಗಿರುತ್ತದೆ. ಆರೋಪಿತನು ಈ ಸ್ವತ್ತುಗಳನ್ನು ದಿಃ 22–10–2017 ರಂದು ಮೂಡಬಿದ್ರಿಯ ಒಂಟಿ ಕಟ್ಟೆಯ ಕಾಯರ್ ಪುಂಡು ಎಂಬಸ್ಥಳದಲ್ಲಿ ಇರುವ ಮನೆಯಿಂದ ಕಳವು ಮಾಡಿರುವುದಾಗಿ ಹೇಳಿರುತ್ತಾನೆ. ಈ ಸ್ವತ್ತುಗಳನ್ನು ಮೂಡಬಿದ್ರಿ ಠಾಣಾ ಅ.ಕ್ರ ಸಂಖ್ಯೆ 434/2017 ಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ.

7. ನಂತರ ಆರೋಪಿಯು ಮುಂದುವರಿದು, ತಾನು ಮೂಡಬಿದ್ರಿಯ ಬಸ್ ನಿಲ್ದಾಣದ ಬಳಿ ಇರುವ ಕಟ್ಟಡ ಹಾಗೂ ಮೂಡಬಿದ್ರಿಯ ಪೇಟೆಯಲ್ಲಿ ನಿರ್ಮಾಣ ಹಂತದಲ್ಲಿ ಇರುವ ಕಟ್ಟಡದಲ್ಲಿ ಇರುವ ಕಟ್ಟಡ ಕಾರ್ಮಿಕರ ಮೊಬೈಲ್ ಫೋನುಗಳನ್ನು ಕಳುವು ಮಾಡಿ ಅವುಗಳನ್ನು ಮಾರಾಟ ಮಾಡಲು ಸಾಧ್ಯವಾಗದೆ, ಅವುಗಳನ್ನು ಅದೇ ಸ್ಥಳದಲ್ಲಿ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಅಡಗಿಸಿಟ್ಟಿದ್ದನ್ನು ತೆಗೆದು ನನ್ನ ಮುಂದೆ ಹಾಜರು ಪಡಿಸಿರುತ್ತಾನೆ. ಸದರಿ ತೊಟ್ಟೆಯಿಂದ 9 ಸ್ಯಾಂ ಸಂಗ್ ಕಂಪನಿಯ ಫೋನುಗಳನ್ನು ಹಾಗೂ ಒಂದು ನೀಲಿ ಕಪ್ಪು ಬಣ್ಣದ ಎಸೂಜಿ ಕಂಪನಿಯ ಮೊಬೈಲ್ ಫೋನ್ ನ್ನು ಹಾಜರು ಪಡಿಸಿರುತ್ತಾನೆ. ಈ ಮೇಲೆ ಹೇಳಿದ ಸ್ವತ್ತುಗಳನ್ನು ಮುಂದಿನ ತನಿಖೆಯ ಸಲುವಾಗಿ ಸ್ವಾಧೀನ ಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ನಾನು ಮಧ್ಯಾಹ್ನ 12–30 ರಿಂದ 13–30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಮಹಜರನ್ನು ಚಾಸಾ–17 ರವರಿಂದ ಗಣಕೀಕೃತಗೊಳಿಸಿರುತ್ತೇನೆ. ಸ್ಥಳದಲ್ಲಿಯೇ ಪ್ರಿಂಟರ್ ನಲ್ಲಿ ಪ್ರಿಂಟ್ ಮಾಡಿಸಿ ಮಹಜರನ್ನು ತಯಾರಿಸಿರುತ್ತೇನೆ. ಸಾಕ್ಷಿ ನಿಪಿ–4 ನ್ನು ನೋಡಿ ಅದರಲ್ಲಿ ತನ್ನ ಸಹಿ

ಇರುವುದಾಗಿ ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3 ಮತ್ತು ನಿಪಿ-4 ನ್ನು ನೋಡಿ ಗುರುತಿಸಿರುತ್ತಾರೆ.

8. ಆರೋಪಿಯು ಮುಂದುವರಿದು ತಾನು ಕಳವು ಮಾಡಿದ ಆಭರಣಗಳನ್ನು ಮಾರಾಟ ಮಾಡಿದ ಅಂಗಡಿಯನ್ನು ತೋರಿಸಿಕೊಡುವುದಾಗಿ ಹೇಳಿದಂತೆ, ನಾನು ಪಂಚರಾಗಿ ಚಾಸಾ-9 ಮತ್ತು ಚಾಸಾ-10 ರವರನ್ನು ಕರೆದುಕೊಂಡು ಆರೋಾಪಿಯೊಂದಿಗೆ ಇಲಾಖಾ ವಾಹನದಲ್ಲಿ ಮಂಗಳೂರು ತಾಲೂಕಿನ ಗುರುಪುರ -ಕೈಕಂಬ ಎಂಬಲ್ಲಿ ಇರುವ ಸುಶೀಲ್ ಜ್ಯೂವೆಲರ್ಸ್ ಗೆ ಕರೆದುಕೊಂಡು ಹೋಗಿ ಅಂಗಡಿಯನ್ನು ತೋರಿಸಿಕೊಟ್ಟಿದ್ದಲ್ಲದೆ , ಅಂಗಡಿಯಲ್ಲಿ ಇದ್ದಂತಹ ಒಬ್ಬ ವ್ಯಕ್ತಿಯನ್ನು ಗಿರೀಶ್ ಆಚಾರ್ಯ ಎಂದು ಪರಿಚಯಿಸಿರುತ್ತಾನೆ. ಸದರಿ ವ್ಯಕ್ತಿಯು ಆರೋಪಿಯಿಂದ ತಾನು ಆಭರಣಗಳನ್ನು ಖರೀದಿಸಿದ್ದಾಗಿ, ಒಪ್ಪಿ ಕೊಂಡ ಮೇರೆಗೆ ಮತ್ತು ಅವುಗಳನ್ನು ಚಾಸಾ-14 ರವರು ಸುರಕ್ಷಿತವಾಗಿ ಬೇರೊಂದು ಸ್ಥಳದಲ್ಲಿ ಇಟ್ಟಿರುವುದಾಗಿ ಹೇಳಿರುತ್ತಾರೆ. ಅವುಗಳನ್ನು ಹಾಜರು ಪಡಿಸಲು ಸಮಯಾವಕಾಶವನ್ನು ಕೋರಿರುತ್ತಾರೆ. ಅದರಂತೆ ಸದರಿ ಸ್ಥಳದಲ್ಲಿ 18-30 ಗಂಟೆಯಿಂದ 19-00 ಗಂಟೆಯವರೆಗೆ ಮಹಜರನ್ನು ಜರುಗಿಸಲಾಯಿತು. ಸದರಿ ಮಹಜರನ್ನು ಚಾಸಾ-17 ರವರ ಮುಖಾಂತರ ಗಣಕೀಕೃತಗೊಳಿಸಲಾಯಿತು. ಸಾಕ್ಷಿಯು ನಿಪಿ-5 ನ್ನು ನೋಡಿ ಗುರುತಿಸಿರುತ್ತಾರೆ. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-5(ಡಿ) ಎಂದು ಗುರುತಿಸಲಾಯಿತು. ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಠಾಣೆಗೆ ಹಾಜರಾಗಿರುತ್ತೇನೆ. ಸ್ವತ್ತು ಪಟ್ಟಿಯನ್ನು ತಯಾರಿಸಿ, ಸ್ವತ್ತು ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

9. ಅದೇ ದಿನ ಚಾಸಾ–14 ರವರು ಮೂಡಬಿದ್ರಿ ಠಾಣೆಗೆ ಹಾಜರಾಗಿ ಸದರಿ ಪ್ರಕರಣದಲ್ಲಿ ಆತ ಆರೋಪಿಯಿಂದ ಖರೀದಿಸಿ ಆಭರಣಗಳನ್ನು ಹಾಜರು ಪಡಿಸವುದಾಗಿ ನುಡಿದಂತೆ ಚಾಸಾ–9 ಮತ್ತು ಚಾಸಾ–10 ರವರ ಸಮಕ್ಷಮದಲ್ಲಿ ಚಾಸಾ–14 ರವರು ಹಾಜರು ಪಡಿಸಿದ್ದನ್ನು ಪರಿಕ್ಷಿಸಿದ್ದು, ಅವುಗಳಲ್ಲಿ –ಎರಡು ಎಳೆಯ ಒಂದು ಕರಿ ಮಣಿ ಸರ , ಅದರ ಕೊನೆಯಲ್ಲಿ ಎರಡು ಕೆಂಪು ಹವಳ ಮತ್ತು ತಾಳಿ ಇರುತ್ತದೆ. ಇದರ ಒಟ್ಟು ತೂಕ 37.02 ಗ್ರಾಂ ಇರುತ್ತದೆ. ಬಂಗಾರದ ನೆಕ್ಲೇಸ್ ಒಂದು ಇದರ ಒಟ್ಟು ತೂಕ 7.730 ಗ್ರಾಂ ಆಗಿರುತ್ತದೆ. ಬಂಗಾರದ ಉಂಗುರಗಳು ಎರಡು 4.280 ಗ್ರಾಂ ಇದ್ದು, ಸದರಿ ಮಾಲುಗಳನ್ನು ಮಾರೂರಿನ ಮನೆಯೊಂದರಿಂದ ಕಳ್ಳತನ ಮಾಡಿದ ಸ್ವತ್ತುಗಳು ಎಂದು ಗುರುತಿಸಿರುತ್ತಾರೆ. ಸದರಿ ಮಾಲುಗಳು ಮೂಡಬಿದ್ರಿ ಠಾಣಾ ಅ.ಕ್ರ ಸಂಖ್ಯೆ364/2017 ಕ್ಕೆ ಸಂಬಂಧಪಟ್ಟಿದ್ದು ಆಗಿರುತ್ತದೆ. ಚಾಸಾ–14 ರವರು ಬಂಗಾರದ ಮುತ್ತಿನ ಸರವೊಂದು, ಇದಕ್ಕೆ ಬಂಗಾರದ ಪದಕವಿರುತ್ತದೆ. ಮಧ್ಯದಲ್ಲಿ ಕೆಂಪುಕಲ್ಲುಗಳನ್ನು ಜೋಡಿಸಲಾಗಿದ್ದು, ಇದರ ಒಟ್ಟು ತೂಕ 19.36 0 ಗ್ರಾಂ ಆಗಿರುತ್ತದೆ. ಬಂಗಾರದದ ಕಾಸ್ ತಾಳಿ ಸರವೊಂದು, ಇದರ ಒಂದೊಂದು ಬದಿಯಲ್ಲಿ ತಲಾ 3 ಕೆಂಪು ಹವಳ ಮತ್ತು ತಲಾ 6 ಬಂಗಾರದ ಗುಂಡಗಳನ್ನು ಹಾಗೂ ಒಂದು ಕಾಸ್ ತಾಳಿಯನ್ನು ಜೋಡಿಸಲಾಗಿರುತ್ತದೆ. ಇದರ ಒಟ್ಟು ತೂಕ 16.00 ಆಗಿರುತ್ತದೆ. ಆರೋಾಪಿಯು ಈ ಸ್ವತ್ತುಗಳನ್ನು ಗುರುತಿಸಿದ್ದು, ಅವುಗಳನ್ನು ಕಲ್ಲಬೆಟ್ಟುವಿನ ಸದಾಶಿವ ಆಚಾರ್ಯ ಎನ್ನುವವರ ಮನೆಯಿಂದ ದಿಃ 05–09–2017 ರಂದು ಕಳವು ಮಾಡಿರುವುದಾಗಿ ತಿಳಿಸಿರುತ್ತಾನೆ. ಸದರಿ ಮಾಲುಗಳು ಮೂಡಬಿದ್ರಿ ಠಾಣಾ ಅ.ಕ್ರ 457/2017 ಕ್ಕೆ ಸಂಬಂದ,ಪಟ್ಟಿದಂಾಗಿರುತ್ತದೆ ಎಂದು ನುಡಿಯುತ್ತಾರೆ.

10. ಆರೋಪಿಯು ಬಂಗಾರದ ಹವಳದ ಸರವೊಂದು, ಇದರಲ್ಲಿ 6 ಕೆಂಪು ಹವಳಗಳನ್ನು ಅಳವಡಿಸಲಾಗಿರುತ್ತದೆ. ಇದರ ಒಟ್ಟು ತೂಕ 15.00 ಗ್ರಾಂ ಆಗಿರುತ್ತದೆ. ಆರೋಪಿಯು ಅದನ್ನು ಫ್ರಾಂತ್ಯ ಗ್ರಾಮದ ವಿಜಯ ಕುಮಾರ್ ಎನ್ನುವವರ ಮನೇಯಿಂದ ದಿಃ 25-09-2017 ರಂದು ಕಳವು ಮಾಡಿದ ಸ್ವತ್ತು ಎಂದು ಗುರುತಿಸಿರುತ್ತಾನೆ. ಸದರಿ ಸ್ವತ್ತುಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದಾಗಿರುತ್ತದೆ.

11. ನಂತರ ಚಾಸಾ-14 ರವರು ಬಂಗಾರದ ಬೆಂಡೋಲೆ ಒಂದು ಜೊತೆ ಇದರಲ್ಲಿ ಹಸಿರು ಮತ್ತು ಕೆಂಪು ಬಣ್ಣದ ಕಲ್ಲುಗಳನ್ನು ಅಳವಡಿಸಲಾಗಿರುತ್ತದೆ. ಇದರ ಒಟ್ಟು ತೂಕ 3.920 ಗ್ರಾಂ ಇರುತ್ತದೆ. ಇವುಗಳನ್ನು ದಿಃ11-10-2017 ರಂದು ಬೆಳುವಾಯಿಯ ದುರ್ಜೊತ್ತು ಎಂಬಲ್ಲಿ ಇರುವ ದಿನೇಶ್ ಎಂಬುವವರ ಮನೆಯಿಂದ ಕಳವು ಮಾಡಿದ್ದಾಗಿ ಆರೋಪಿಯು ಗುರುತಿಸಿರುತ್ತಾನೆ. ಈ ಎಲ್ಲಾ ಬಂಗಾರದ ಸ್ವತ್ತುಗಳನ್ನು ಅಕ್ಕಸಾಲಿಗರಾದ ಚಾಸಾ-8 ರವರಿಂದ ಪರಿಶೀಲಿಸಿರುತ್ತೇನೆ. ಈ ಎಲ್ಲಾ ಸ್ವತ್ತುಗಳು ಪ್ರಕರಣಕ್ಕೆ ಸಂಬಂಧಪಟ್ಟಿದ್ದಾಗಿದ್ದರಿಂದ ರಾತ್ರಿ 8-30 ಗಂಟೆಯಿಂದ ರಾತ್ರಿ 9-30 ಗಂಟೆಯ ಅವಧಿಯಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಇದಕ್ಕೆ ಸಂಬಂಧಿಸಿ ನಾನು ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಸಾಕ್ಷಿ ನಿಪಿ-10 2 ನೇ ಪುಟವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-6 ನ್ನು ನೋಡಿ ಅದರಲ್ಲಿ ತನ್ನ ಸಹಿ ಇರುವುದಾಗಿ ನುಡಿದಿರುತ್ತಾರೆ. ಸದರಿ ಸಹಿಯನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು.

12. ದಿಃ 18-11-2017 ರಂದು ಬಡಗ ಎಡಪದವು ಗ್ರಾಮದ ಉರ್ಕಿ ಎಂಬಲ್ಲಿ ಇರುವ ಜಯಕುಮಾರ್ ಎನ್ನುವವರು ಮನೆಯಲ್ಲಿ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವಾಗ

ಅಕ್ಕಸಾಲಿಗ ಹಾಜರಿದ್ದು, ಅವರಿಂದ ಚಿನ್ನವನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಚಾಸಾ-6 , ಚಾಸ-8 ರಿಂದ ಚಾಸಾ-11, ಚಾಸಾ-14 , 17 ಮತ್ತು ಚಾಸಾ-20 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ

13. ದಿಃ 19-11-2017 ರಂದು ಚಾಸಾ-1 ಮತ್ತು ಚಾಸಾ-2 ರವರ ಮರುಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆರೋಾಪಿಯನ್ನು ನೋಡಿದರೆ ಗುರುತಿಸಬಲ್ಲೆನು. ಆರೋಪಿಯು ಹಾಜರಿಲ್ಲದ ಕಾರಣ ಆತನ ಗುರುತಿಸುವಿಕೆಯಲ್ಲಿ ತಕರಾರು ಇಲ್ಲವೆಂದು ಆರೋಾಪಿ ಪರ ವಕೀಲರು ಹೇಳಿರುತ್ತಾರೆ.

14. ದಿಃ 21-11-2017 ರಂದು ಆರೋಪಿಯನ್ನು ಪೊಲೀಸ್ ತಾಬೆಗೆ ಪಡೆದುಕೊಂಡು, ದಿಃ 22-11-2017 ರಂದು ಆರೋಪಿಯು ನೀಡಿದ ಸ್ವಇಚ್ಛಾ ಹೇಳಿಕೆಯಂತೆ ತಾನು ಕೃತ್ಯಕ್ಕೆ ಉಪಯೋಗಿಸಿದ ಬೈಕನ್ನು ತೋರಿಸಿಕೊಡುವುದಾಗಿ ಹೇಳಿದ್ದು, ಚಾಸಾ-12 ಮತ್ತು ಚಾಸಾ-13 ರವರೊಂದಿಗೆ ತೆರಳಿದ್ದು, ಆರೋಪಿಯು ತಾನು ವಾಸವಾಗಿರುವ ಬಡಗ ಎಡಪದವು ಗ್ರಾಮದ ಉರ್ಕಿ ಎಂಬಲ್ಲಿ ಇರುವ ತನ್ನ ವಾಸದ ಮನೆಯಲ್ಲಿ ಇರುವ ತನ್ನ ತಂದೆಗೆ ಸೇರಿದ ಒಂದು ಕೆಎ-19 ಎಕ್ಸ್ 6926 ನೇ ಕಪ್ಪು ಬಣ್ಣದ ಬಜಾಜ್ ಕಂಪನಿಯ ಪಲ್ಸರ್ ಮೋಾಟಾರು ಸೈಕಲನ್ನು ತೋರಿಸಿಕೊಟ್ಟಿದ್ದು, ಅದನ್ನು ಪಂಚನಾಮೆಯಡಿಯಲ್ಲಿ ಬೆಳಿಗ್ಗೆ 11-00 ರಿಂದ 11-45 ಗಂಟೆಯ ನಡುವಿನಲ್ಲಿ ಸ್ವಾಧೀನ ಪಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು

ಚಾಸಾ–21 ರವರ ಮುಖಾಂತರ ಗಣಕೀಕೃತ ಗೊಳಿಸಿರುತ್ತೇನೆ. ಸಾಕ್ಷಿ ನಿಪಿ–8 ನ್ನು ನೋಡಿ ಅದರಲ್ಲಿ ತನ್ನ ಸಹಿ ಇರುವುದಾಗಿ ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ–8(ಸಿ) ಎಂದು ಗುರುತಿಸಲಾಯಿತು.

15. ನಂತರ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಮೂಡಬಿದ್ರಿಯ ಪೇಟೆಯಲ್ಲಿ ಇರುವ ವೆಂಕಟರಮಣ ದೇವಸ್ಥಾನದ ಬಳಿ ಇರುವ ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರ ಮೊಬೈಲ್ ಫೋನ್ ನ್ನು ಕಳವು ಮಾಡಿದ ಸ್ಥ,ಳವನ್ನು ತೋರಿಸಿಕೊಡುವುದಾಗಿ ಹೇಳಿದ್ದು, ಸದರಿ ಸ್ಥಳಕ್ಕೆ ಆತನು ನಮ್ಮನ್ನು ಕರೆದುಕೊಂಡು ಹೋಗಿರುತ್ತಾನೆ. ಸದರಿ ನಿರ್ಮಾಣದ ಹಂತದ ಕಟ್ಟಡದ ಬಳಿ ಕಾರ್ಮಿಕರು ವಾಸಮಾಡಿಕೊಂಡಿರುವ ತಾತ್ಕಾಲಿಕ ಶೆಡ್ಡಿನ ಬಳಿ ಕರೆದುಕೊಂಡು ಹೋಗಿ, ಇದೇ ಶೆಡ್ಡಿನಿಂದ ತಾನು ಮೊಬೈಲುಗಳನ್ನು ಕಳುವು ಮಾಡಿದ್ದಾಗಿ ಹೇಳಿರುತ್ತಾರೆ. ಸದರಿ ಸ್ಥಳದಲ್ಲಿ ವಿಚಾರ ಮಾಡಿದಾಗ, ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಉತ್ತರ ಭಾರತದವರಾಗಿದ್ದು, ಅವರು ಅವರವರ ರಾಜ್ಯಕ್ಕೆ ತೆರಳಿರುವುದಾಗಿ ನನಗೆ ತಿಳಿದು ಬಂದಿರುತ್ತದೆ. ಈ ಬಗ್ಗೆ ಪಂಚನಾಮೆಯನ್ನು ಚಾಸಾ–12 ಮತ್ತು ಚಾಸಾ–13 ರವರ ಸಮಕ್ಷಮದಲ್ಲಿ 12–30 ರಿಂದ 13–30 ಗಂಟೆಯ ನಡುವಿನಲ್ಲಿ ಚಾಸಾ–21 ರವರಿಂದ ಗಣಕೀಕೃತಗೊಳಿಸಿ ತಯಾರಿಸಿರುತ್ತೇನೆ. ಸಾಕ್ಷಿ ನಿಪಿ–9 ನ್ನು ನೋಡಿ ಅದರಲ್ಲಿ ತನ್ನ ಸಹಿ ಇರುವುದಾಗಿ ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ–9(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–12 , ಚಾಸಾ–13, ಚಾಸಾ–15, ಚಾಸಾ 16, 19 ಮತ್ತು ಚಾಸಾ–21 ರವರ ಹೇಳಿಕೆಗಳನ್ನು ಕೂಡ ಪಡೆದುಕೊಂಡಿರುತ್ತೇನೆ. ನಂತರ ಆರೋಾಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ದಿಃ 10-02-2018 ರಂದು ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್ . ಡಿ ರವರಿಂದಃ</u>**

1. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬಟ್ಟೆಯ ತುಂಡಿನಲ್ಲಿ ಚಿನ್ನದ ಆಭರಣಗಳು ಇದ್ದವು ಎಂದು ಹೇಳಿದ್ದು, ಸದರಿ ಬಟ್ಟೆಯ ತುಂಡದನ್ನು ನೀವು ಸ್ವಾಧೀನ ಪಡಿಸಿಕೊಂಡಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಮೊಬೈಲ್ ಫೋನುಗಳು ಪ್ಲಾಸ್ಟಿಕ್ ತೊಟ್ಟೆಯಲ್ಲಿ ಇದ್ದವು ಎಂದು ಹೇಳಿದ್ದು, ಸದರಿ ಪ್ಲಾಸ್ಟಿಕ್ ತೊಟ್ಟೆಯನ್ನು ನೀವು ಸ್ವಾ ಧೀನ ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

2. ದಿಃ 18-11-2017 ರಂದು ನೀವು ಆರೋಪಿಯ ಮನೆಗೆ ಭೇಟಿ ನೀಡಿರುತ್ತೀರಿ ಎಂದು ಹೇಳಿದ್ದು, ಆರೋಪಿಯ ಮನೆಯ ಸುತ್ತ-ಮುತ್ತಲೂ ನೀವು ಪರಿಶೀಲಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿಃ 20-11-2017 ರಂದು ನೀವು ಆರೋಪಿಯ ಮನೆಯ ಬಳಿಯಿಂದ ದ್ವಿಚಕ್ರವಾಹನವನ್ನು ಸ್ವಾ ದಿಚೀನ ಪಡಿಸಿಕೊಂಡಿರುತ್ತೀರಿ ಎಂದು ಹೇಳಿದ್ದು, ನೀವು ದಿಃ 18-11-2017 ರಂದು ಸದರಿ ಮನೆಯ ಬಳಿ ಇರುವಾಗ, ಸದರಿ ದ್ವಿಚಕ್ರವಾಹನವು ಸದರಿ ಮನೆಯ ಬಳಿ ಇತ್ತೋ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯ ತಂದೆ ಸದರಿ ದ್ವಿಚಕ್ರವಾಹನವನ್ನು ಬಳಸಿಕೊಂಡಿದ್ದರಿಂದ ನಾನು ದಿಃ 18-11-2017 ರಂದು ಸದರಿ ಸ್ಥಳಕ್ಕೆ ಹೋದಾಗ ಸದರಿ

ದ್ವಿಚಕ್ರವಾಹನವನ್ನು ಕಂಡಿರುವುದಿಲ್ಲ. ದಿಃ 18-11-2017 ರಂದು ಆರೋಪಿಯ ಮನೆಗೆ ಹೋದ ನಂತರ ನೀವು ಎಲ್ಲಿಗೆ ಹೋಗಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಠಾಣೆಗೆ ಮರಳಿ ಹೋಗಿರುತ್ತೇವೆ.

3. ಆರೋಪಿಯ ಮನೆ ಇರುವ ಸ್ಥಳದಿಂದ ಸುಶೀಲ್ ಜ್ಯುವೆಲರ್ಸ್ ಇರುವುದು ಸುಮಾರು 5-6 ಕಿ.ಮಿ ದುಾರದಲ್ಲಿ ಎಂದರೆ ಸರಿಯಲ್ಲ, ಸುಮಾರು 10 ಕಿ.ಮಿ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಬಡಗ ಎಡಪದವು ಗ್ರಾಮದಿಂದ ನಮ್ಮ ಪೊಲೀಸ್ ಠಾಣೆಯು ಸುಮಾರು 15 ಕಿ.ಮಿ ದೂರದಲ್ಲಿ ಇರುತ್ತದೆ.

4. ಆರೋಪಿಯಿಂದ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೀರಿ ಎಂದು ಹೇಳಿದ್ದು ಸದರಿ ಸ್ವಇಚ್ಛಾ ಹೇಳಿಕೆಯಲ್ಲಿ ಸುಶೀಲ್ ಜ್ಯುವೆಲರ್ಸ್ ನ ಬಗ್ಗೆ ನಮೂದು ಇರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನಮೂದಿಸಲಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನೀವು ಆರೋಪಿಯಿಂದ ಸ್ವಇಚ್ಛಾ ಹೇಳಿಕೆಯನ್ನು ಬರವಣಿಯಲ್ಲಿ ಒಮ್ಮೆ ಮಾತ್ರ ಪಡೆದು ಕೊಂಡಿರುತ್ತೀರಿ ಎಂದರೆ ಸಾಕ್ಷಿ ಹೌದು, ಸಾಕ್ಷಿಯು ಮುಂದುವರಿದು ಆತ ಮೌಖಿಕವಾಗಿ ಹೇಳಿದ್ದನ್ನೂ ಕೂಡ ನಾನು ಪರಿಗಣಿಸಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿಯಿಂದ ನೀವು ಮೌಖಿಕವಾಗಿ ಪಡೆದುಕೊಂಡಿರುತ್ತೀರಿ ಎಂದು ಹೇಳಿದ ಹೇಳಿಕೆಯನ್ನು ಬರವಣಿಗೆಯ ರೂಪದಲ್ಲಿಪಡೆದುಕೊಳ್ಳದೆ ಇರಲು ಏನು ಕಾರಣವೆಂದು ನಿಮ್ಮ ಅಂತಿಮ ವರದಿಯಲ್ಲಿ ನೀವು ತಿಳಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

5. ಸುಶೀಲ್ ಜ್ಯುವೆಲರ್ಸ್ ಗೆ ನೀವು ಹೋದಾಗ, ಚಾಸಾ-14 ರವರು ಒಡವೆಗಳನ್ನು ಸುರಕ್ಷಿತವಾದ ಒಂದು ಸ್ಥಳದಲ್ಲಿ ಇಟ್ಟಿರುವುದಾಗಿ ನಿಮ್ಮಲ್ಲಿ ಹೇಳಿದ್ದರು ಎಂದು ನೀವು ನಿಮ್ಮ ಮುಖ ವಿಚಾರಣೆಯಲ್ಲಿ ಹೇಳಿದ್ದು, ಸದರಿ ಸ್ಥಳವು ಯಾವುದಾಗಿರುತ್ತದೆ ಎಂದು ನೀವು ಪರಿಶೀಲಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸುಶೀಲ್ ಜ್ಯುವೆಲರ್ಸ್ ನಲ್ಲಿ ಸಿ.ಸಿ. ಟಿ.ವಿ ಕ್ಯಾಮಾರಾ ಅಳವಡಿಸಿದ ಬಗ್ಗೆ ನನಗೆ ನೆನಪಿಲ್ಲ. ಸುಶೀಲ್ ಜ್ಯುವೆಲರ್ಸ್ ನಲ್ಲಿ ಆರೋಪಿಯಿಂದ ಆಭರಣಗಳನ್ನು ಪಡೆದುಕೊಳ್ಳಲಾಗಿರುತ್ತದೆ ಎಂದು ಹೇಳುವಂತಹ ಏನಾದರೂ ದಾಖಲಾತಿಗಳನ್ನು ಪರಿಶೀಲಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಪರಿಶೀಲಿಸಿರುತ್ತೇನೆ. ದಾಖಲಾತಿಗಳು ಇರುವುದಿಲ್ಲ ಎಂದು ಹೇಳಿದ ಮೇರೆಗೆ ನಾನು ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ. ನೀವು ಸುಶೀಲ್ ಜ್ಯುವೆಲರ್ಸ್ ನಲ್ಲಿ ದಾಖಲಾತಿಗಳನ್ನು ಪರಿಶೀಲಿಸಿದ ಬಗ್ಗೆ ನಿಪಿ-5ರಲ್ಲಿ ನಮೂದಿಸಲಾಗಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆದರೆ ಸಾಕ್ಷಿಯು ಅದಕ್ಕೆ ಸಂಬಂಧಿಸಿದ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಚಾಸಾ-14 ರವರು ಎಷ್ಟು ರೂಪಾಯಿಗಳಿಗೆ ಬಂಗಾರವನ್ನು ಖರೀದಿಸಿರುತ್ತಾರೆ ಎಂದು ಅವರ ಹೇಳಿಕೆಯಲ್ಲಿ ಹೇಳಿರುತ್ತಾರೋ ಎಂಬ ಪ್ರಶ್ನೆಗೆ ಸಾಕ್ಷಿಯು ಚಾಸಾ-14 ರವರು ನನ್ನಲ್ಲಿ ಅವರು ಎಷ್ಟು ರೂಪಾಯಿಗಳಿಗೆ ಚಿನ್ನವನ್ನು ಖರೀದಿಸಿರುತ್ತಾರೆ ಎಂದು ಅವರಿಗೆ ನೆನಪಿಲ್ಲ ಎಂದು ನನ್ನಲ್ಲಿ ಹೇಳಿರುತ್ತಾರೆ. ಆರೋಪಿಯು ಚಾಸಾ-14 ರವರಿಗೆ ಆಭರಣಗಳನ್ನು ನೀಡಿರುತ್ತಾರೆ ಎಂದು ತೋರಿಸಲು ದಾಖಲಾತಿಗಳು ಇರುತ್ತದೆಯೋ ಎಂದು ನೀವು ಪರಿಶೀಲಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಚಾಸಾ-14 ರವರು ಯಾವುದೇ ದಾಖಲಾತಿಗಳನ್ನು

ಮಾಡಿಕೊಂಡಿರುವುದಿಲ್ಲ ಎಂದು ನನ್ನಲ್ಲಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-14 ರವರ ಹೇಳಿಕೆಯಲ್ಲಿ ಅವರು ದಾಖಲಾತಿಗಳನ್ನು ಸೃಷ್ಠಿಸಿಕೊಂಡಿರುವುದಿಲ್ಲ ಮತ್ತು ಇಂತಿಷ್ಟು ಹಣಕ್ಕೆ ಆಭರಣಗಳನ್ನು ಖರೀದಿಸಿರುತ್ತಾರೆ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

6. ಚಾಸಾ-8 ರವರು ಆಭರಣಗಳನ್ನು ತೂಕ ಮಾಡಿ, ಅವುಗಳು ಚಿನ್ನದ ಆಭರಣಗಳು ಆಗಿರುತ್ತದೆ ಎಂದು ಹೇಳುತ್ತಾ ಪ್ರಮಾಣ ಪತ್ರವನ್ನು ನೀಡಿರುತ್ತಾರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ನೀವು ಆಭರಣಗಳನ್ನು ಸ್ವಾಧೀನ ಪಡಿಸಿಕೊಂಡಿರುತ್ತೀರಿ ಎಂದು ಹೇಳಿ ನಿರ್ಮಿಸಿದಂತಹ ಮಹಜರಿನಲ್ಲಿ ಅಕ್ಕಸಾಲಿಗನ ಸಹಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

7. ದಿಃ 22-11-2017 ರಂದು ವೆಂಕಟರಮಣ ದೇವಸ್ಥಾನದ ಬಳಿ ಇರುವ ಒಂದು ಕಟ್ಟಡದಲ್ಲಿ ಒಂದು ಮಹಜರನ್ನು ಜರುಗಿಸಿರುತ್ತೇನೆ. ಸದರಿ ದೇವಸ್ಥಾನದ ಬಳಿ ಜರುಗಿಸಿದ ಮಹಜರಿಗೆ ಪಂಚರ ಸಹಿಯನ್ನು ಎಲ್ಲಿ ಪಡೆದಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಸ್ಥಳದಲ್ಲಿಯೇ ಪಡೆದುಕೊಂಡಿರುತ್ತೇನೆ ಎಂದು ನುಡಿಯುುತ್ತಾರೆ. ಸದರಿ ಸ್ಥಳದಲ್ಲಿ ಎಷ್ಟು ಮೊಬೈಲ್ ಫೋನುಗಳು ಕಳುವುವಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಮೊಬೈಲುಗಳ ವಾರಸುದಾರರು ದೂರನ್ನು ನೀಡದೇ ಇರುವುದರಿಂದ ನಾನು ಅದರ ಬಗ್ಗೆ ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆ ಅಥವಾ ಮರುಹೇಳಿಕೆಯಾಗಲೀ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತಹ

ಘಟನಾ ಸ್ಥ,ಳಕ್ಕೆ ಭೇಟಿ ನೀಡಿರುವುದಿಲ್ಲ, ಮು.ಮಾ–1 ನ್ನು ಅಮಾತ್ತು ಪಡಿಸಿಕೊಂಡಿರುವುದಿಲ್ಲ, ನಕ್ಷೆಯನ್ನು ಬಿಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 18–11–2017 ಮತ್ತು ದಿಃ 22–11–2017 ರಂದು ಆರೋಪಿಯ ಮನೆಗೆ ನೀವು ಭೇಟಿ ನೀಡಿರುವುದಿಲ್ಲ ಮತ್ತು ಯಾವುದೇ ಬಂಗಾರ, ಮೊಬೈಲ್ ಮತ್ತು ಬೈಕನ್ನು ಸ್ವಾ ಧೀನ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನಗಳಲ್ಲಿ ನೀವು, ಸದರಿ ಸ್ಥಳದಲ್ಲಿ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಸುಶೀಲ್ ಜ್ಯುವೆಲರ್ಸ್ ಗೆ ಭೇಟಿ ನೀಡಿರುವುದಿಲ್ಲ ಮತ್ತು ಅಲ್ಲಿ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–14 ರವರು ಪೊಲೀಸ್ ಠಾಣೇಗೆ ಹಾಜರಾಗಿ ಯಾವುದೇ ಬಂಗಾರದ ಆಭರಣಗಳನ್ನು ನಿಮ್ಮ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 18–11–2017 ರಂದು ನೀವು ಠಾಣೆಯಲ್ಲಿ ಯಾವುದೇ ಮಹಜರು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಎಲ್ಲಾ ಮಹಜರುಗಳನ್ನು, ನಕ್ಷೆಯನ್ನು ಪ್ರಕರಣಕ್ಕೆ ಪೂರಕವಾಗುವಂತೆ ಠಾಣೆಯಲ್ಲಿ ಸೃಷ್ಠಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ತನಿಖೆಯನ್ನು ಮಾಡದೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲ.)**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/–

ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ